ಕಾಡಿತು. ಮುಂದೇನಾಯಿತೋ? ರಾಜಕುಮಾರನು ಅವಳನ್ನು ಕಾಪಾಡುವನೆ? ಅವರ ಪ್ರೇಮಕತೆ ಸುಖಾಂತ್ಯವಾಗುವುದೇ? ಎಂದೆಲ್ಲ ಯೋಚಿಸುವಳು. ಒಂದು ಕ್ಷಣ ರಕ್ಕಸನ ಬಂಧನದಿಂದ ತಪ್ಪಿಸಿಕೊಂಡು ಪಾರಾಗುತ್ತಿರುವ ರಾಜಕುಮಾರ ಮತ್ತು ರಾಜಕುಮಾರಿ ತಾವೇ ಎಂಬ ನವಿರಾದ ಭಾವನೆಯಿಂದ ಕಣ್ಣು ಮುಚ್ಚಿಬಂದಂತೆ ಅನಿಸಿತು. ಅದು ಒಂದೇ ಕ್ಷಣ ಅಷ್ಟೇ! ಭಡೋಲ್ ಎಂಬ ಶಬ್ದದಿಂದ ಕಣ್ಬಿಟ್ಟಾಗ ಸೈಕಲ್ಲು ರಸ್ತೆ ಬಿಟ್ಟು ತೋಡಿನಲ್ಲಿ ಅಡ್ಡ ಮಲಗಿತ್ತು. ಹೇಗೋ ಕಾಲೂರಿದ ರಮಿತ ಸುಮಿಯನ್ನೂ ಹಿಡಿದೇ ನೆಲಕ್ಕೊರಗಿದ್ದ. ಸುಮಿಗೆ ಕೋಪವೂ ಅಳುವೂ ಉಕ್ಕಿ, 'ಲೇ ಕಪ್ಪೆ ಧ್ವನಿಯವ್ನೇ, ಕಣ್‌ಮುಚ್ಚಿ ಸೈಕಲ್ ಹೊಡಿತಿದ್ದಿಯೇನೋ?' ಎಂದಳು. 'ನೀ ಕನಸು ಕಾಣ್ತಿದ್ದೋರ ಥರ ಯಾಕೆ ಜೋಲಿ ಹೊಡೆದದ್ದು?' ಎಂದು ಅವಳನ್ನು ಕೈಹಿಡಿದು ಎಬ್ಬಿಸಲು ಹೋದನು. ಅವಳು ಕೊಸರಿಕೊಂಡು ಅವನ ಕೆನ್ನೆಗೆ ಒಂದು ಬಿಗಿದು ಅಲ್ಲಿಂದ ಓಡುತ್ತಾ ಸ್ಕೂಲು ತಲುಪುವುದಕ್ಕೂ ಪಿಟಿ ಮಾಸ್ತರ್ ಶೀಟಿ ಊದುವುದಕ್ಕೂ ಸಮಾ ಆಯ್ತು!

* * *

ಚಿಗರೆಯಂತಹ ಕಾಲುಗಳನ್ನು ಹೊಂದಿದ್ದ ಸುಮಿಯನ್ನು ಖೋಖೋ ಕೋರ್ಟಿನಲ್ಲಿ ಹಿಡಿಯುವುದು ಸುಲಭವಾಗಿರಲಿಲ್ಲ. ಎಲ್ಲರೂ ಅವಳ ಜಡೆ ಹಿಡಿಯಲು ಪ್ರಯತ್ನಿಸುವುದೇ ಹೆಚ್ಚು. ಯಾಕೆಂದರೆ ಮಿಂಚಿನಂತೆ ಓಡುವಾಗ ಅವಳ ಮಾರುದ್ದದ ಕೂದಲ ಜಡೆ ಗಾಳಿಯಲ್ಲಿ ಓಲಾಡುತ್ತಿರುತ್ತಿತ್ತು. ಆ ನಿನ್ನ ನಾಗರಹಾವನ್ನುಸೊಂಟಕ್ಕೆನಾಲ್ಕೈದುಸುತ್ತುಸುತ್ಕೋಳೇ ಎಂದು ಯಾವಾಗ್ಲೂ ರಮಿತ ಚಾಷ್ಟಿ ಮಾಡುತ್ತಿದ್ದದ್ದು ನೆನಪಾಯಿತು. ಹಾಗೇ ಮಾಡಿಕೊಂಡಳು. ಸತ್ತವನು ಆಟ ನೋಡಲು ಬಂದಿರಬಹುದೇ! ಪ್ರೇಕ್ಷಕರ ನಡುವೆ ಅವನು ನಿಂತಿರುವಂತೆ ಭಾಸವಾಯಿತವಳಿಗೆ. ಕೆನ್ನೆಗೆ ಬಾರಿಸಿದಾಗ ಅವನ ಮುಖ ನೋಡಬೇಕಿತ್ತು! ಛೇ, ಅಷ್ಟು ಜೋರಾಗಿ ಹೊಡೆಯಬಾರದಿತ್ತು, ಪಾಪ... ಎಂಬೆಲ್ಲ ಯೋಚನೆಯಲ್ಲಿ ಸುಮಿ ನಿಧಾನಿಸಿದಾಗ ಔಟ್ ಆಗುವವಳಿದ್ದಳು. ಎಲ್ಲರೂ ಸುಮಿ ಫಾಸ್ಟ್ ಫಾಸ್ಟ್ ಎಂದು ಕೂಗಿದಾಗ ಎಚ್ಚೆತ್ತು ವೇಗ ಹೆಚ್ಚಿಸಿದಳು. ಎಲ್ಲೂ ನಿಲ್ಲದೇ ಮಿಂಚಿನಂತೆ ಓಡಿದಳು. ಚಕ್ಕನೇ ತಿರುಗಿ ದಿಕ್ಕು ಬದಲಿಸಿದಳು. ಅವಳನ್ನು ಹಿಡಿಯುವುದು ಯಾರಿಗೂ ಸಾಧ್ಯವಾಗಲಿಲ್ಲ. ಆದರೆ ಓಡಾಡುವಾಗ ಅವಳಿಗೆ ಕಾಲು, ತೊಡೆಯೆಲ್ಲಾ ಬೆವತು ಹೋದಂತೆ, ತೊಡೆ ನಡುವೆ ಹಸಿಹಸಿಯಾದಂತೆ ಅನಿಸುತ್ತಿತ್ತು. ಆಟದ ನಡುವೆಯೇ ಸ್ಕರ್ಟನ್ನು ಸರಿಪಡಿಸಿಕೊಳ್ಳುವವಳ ಹಾಗೆ ಒರೆಸಿಕೊಂಡರೂ ಮತ್ತೆ ಅಂಟಂಟಾದ ದ್ರವ ಕೆಳಗಿಳಿಯುತ್ತಿರುವಂತೆ! ಶ್ಯಿ, ಔಟಾದರೆ ಸಾಕು, ಒಮ್ಮೆ ಟಾಯ್ಲೆಟ್‌ಗೆ ಹೋಗಿ ಬರಬೇಕು ಅಂದುಕೊಂಡಳು... ಎಲ್ಲರೂ ಸುಮಿ ಫಾಸ್ಟ್ ಅನ್ನುತ್ತಿದ್ದರೂ ಅವಳ ಮನಸ್ಸು ಚಂಚಲಗೊಂಡಿದ್ದರಿಂದ ವೇಗ ಕಡಿಮೆಯಾಗಿ ಔಟ್ ಆಗಿಬಿಟ್ಟಳು!

ಒಂದ್ನಿಮಿಷ ಬಂದೆ ಎನ್ನುತ್ತಾ ದೌಡಾಯಿಸಿದವಳನ್ನು ವಾಪಸು ಕರೆದ ಪಿಟಿ ಸರ್, 'ಹೋಗಿ ಸುಮ್ನೇ ಆಡು, ಮುಂದಿನ ಸುತ್ತು ನಮ್ಮ ಚೇಸಿಂಗು' ಎಂದು ಅಬ್ಬರಿಸಿದರು. ಸುಮಿಗೆ ಪಿಟಿ ಸರ್ ಥೇಟ್ ಕಥೆಯೊಳಗಿನ ರಾಕ್ಷಸನಂತೆ ಕಂಡರು. ಯಾವ ಸ್ಕೂಲು ಗೆಲ್ಲುವುದು ಎಂಬ ಕುತೂಹಲದಲಿದ್ದ ಎಲ್ಲರ ಕಣ್ಣುಗಳು ತನ್ನನ್ನೇ ದಿಟ್ಟಿಸುತ್ತಿವೆ ಅನಿಸಿತು. ಮಳ್ಳ ರಮಿತ ಮಾತ್ರ ಎಲ್ಲಿ ಹಾಳಾದನೋ!

ಎದುರಾಳಿ ಟೀಮಿನವರನ್ನು ಬೆನ್ನಟ್ಟಲು ಸಾಲಿನಲ್ಲಿ ಕುಳ್ಳುವಾಗ ಮತ್ತೆ ಸುಮಿಗೆ ತೊಡೆಯಂಚಿಂದ ನೀರುನೀರು ಇಳಿಯುವ ಹಾಗೆನಿಸಿತು. ಶ್ಯಿ! ಏನಾಗಿದೆ ಇಂದು. ದೇವರೇ ಬೇಗ ಆಟ ಮುಗಿದರೆ ಸಾಕು... ಟಾಯ್ಲೆಟ್‌ಗೆ ಹೋಗಿ ಬರಬೇಕು. ಸುಮಿ ಸುಮಿ ಫಾಸ್ಟ್ ಫಾಸ್ಟ್ ಎಂದು ಕೂಗಿದ್ದು ರಮಿತನೇ ಇರಬೇಕು ಅನಿಸಿತು. ಕೋರ್ಟಿನಲ್ಲಿದ್ದ ಮೂವರು ಆಟಗಾರರನ್ನು ಮಿಂಚಿನಂತೆ ಬೆನ್ನಟ್ಟಿ ಒಬ್ಬಳನ್ನು ಔಟ್ ಮಾಡಿಬಿಟ್ಟಳು. ಚಪ್ಪಾಳೆ...ಚಪ್ಪಾಳೆ. ಸುಮಿ ಇನ್ನೊಬ್ಬಳಿಗೆ ಖೋ ಕೊಟ್ಟು ಕುಳ್ಳುವಾಗ ಸ್ಕರ್ಟನ್ನು ತೊಡೆಗೊತ್ತಿ ಕೂತಳು. ಓ ದೇವರೇ ಸ್ಕರ್ಟ ಕೂಡ ಒದ್ದೆಯಾಗಿದೆ!

* * *

ಸುಮಿಯ ಟೀಮ್ ಚಾಂಪಿಯನ್ ಆದದ್ದೇನೋ ನಿಜ. ಎಲ್ಲರೂ ಸುಮಿಯನ್ನು ತಾರೀಫ್ ಮಾಡುತ್ತಿದ್ದದ್ದೂ ನಿಜ. ಆದರೆ ಸುಮಿ ಆ ಖುಶಿ ಅನುಭವಿಸುವ ಸ್ಥಿತಿಯಲ್ಲಿರಲಿಲ್ಲ. ಆಟ ಮುಗಿದದ್ದೇ ಟಾಯ್ಲೆಟ್ಟಿಗೆ ಓಡಿದಳು. ಅಯ್ಯೋ! ಕಾಲು ತೊಡೆ ಒಳಚೆಡ್ಡಿಯೆಲ್ಲ ಕೆಂಪುಕೆಂಪಾಗಿದೆ. ಸ್ಕರ್ಟು ಕೂಡ ಅಲ್ಲಲ್ಲಿ ಹಸಿಯಾಗಿತ್ತು. ರಮಿತ ಸೈಕಲ್ಲಿನಿಂದ ಬೀಳಿಸಿದಾಗ ಗಾಯವಾಗಿರಬಹುದೇ ಎಂದು